ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ತಹಶೀಲ್ದಾರರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/28/2015-16 ದಿನಾಂಕ: 27-07-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕೆ.ಬಸವರಾಜ ತಂದೆ ಲೇಟ್ ಕೆ.ಸಿದ್ದಪ್ಪ<br>2)ಕೆ.ನಾಗೇಂದ್ರಪ್ಪ ತಂದೆ ಲೇಟ್ ಕೆ.ಸಿದ್ದಪ್ಪ<br>3)ಕೆ. ಮರುಳನಗೌಡ ತಂದೆ ಲೇಟ್ ಕೆ.ಸಿದ್ದಪ್ಪ<br>ಅಮ್ಮನಕೇರಿ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೂಡ್ಲಿಗಿ |
| ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 211ಬಿ. 212ಎ. ವಿಸ್ತೀರ್ಣ 1-82. 1-77. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 211ಬಿ. 212ಎ. ವಿಸ್ತೀರ್ಣ 1-82. 1-77. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಕೆ.ಮರುಳನಗೌಡ ತಂದೆ ಲೇಟ್ ಕೆ.ಸಿದ್ದಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಅಮ್ಮನಕೇರಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 16-05-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಪಟ್ಟದಾರರಾದ ಕೆ.ಬಸಮ್ಮ ಇವರಿಗೆ ಇನ್ನು ಮೂರುಜನ ಹೆಣ್ಣು ಮಕ್ಕಳಿದ್ದು ಅವರು ನಮೂನೆ-21 ಕ್ಕೆ ಸಹಿ ಮಾಡಲು ನಿರಾಕರಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 26/2014-15. ದಿನಾಂಕ 18-06-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 19-08-2015 ರಿಂದ 27-07-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಅಮ್ಮನಕೇರಿ ಗ್ರಾಮದ ಸನಂ 211ಬಿ. 212ಎ. ವಿಸ್ತೀರ್ಣ 1-82. 1-77. ಎಕ್ರೆ ಜಮೀನುಗಳು ನಮ್ಮ ತಾಯಿಯವರಾದ ಕೆ.ಬಸಮ್ಮ ಗಂಡ ಕಾಡಸಿದ್ದಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 05-12-2012 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಪಟ್ಟದಾರರು ಇನ್ನಿತರೇ ವಾರಸುದಾರರ ಹೆಸರುಗಳನ್ನು ಕೈಬಿಟ್ಟು ಅರ್ಜಿ ಸಲ್ಲಿಸಿರುವುದು ಕಂಡು ಬಂದ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 211ಬಿ. 212ಎ. ವಿಸ್ತೀರ್ಣ 1–82. 1–77. ಎಕ್ರೆ ಜಮೀನುಗಳ ಅರ್ಜಿದಾರರು ಇನ್ನಿತರೇ ವಾರಸುದಾರರ ಹೆಸರುಗಳನ್ನು ವಂಶವೃಕ್ಷದಲ್ಲಿ ಕೈಬಿಟ್ಟು ಅರ್ಜಿ ಸಲ್ಲಿಸಿರುವ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 27–07–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು ಕೂಡ್ಲಿಗಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೆ.ಮರುಳನಗೌಡ ತಂದೆ ಲೇಟ್ ಕೆ.ಸಿದ್ದಪ್ಪ. ಕೆ.ನಾಗೇಂದ್ರಪ್ಪ ತಂದೆ ಲೇಟ್ ಕೆ.ಸಿದ್ದಪ್ಪ. ಕೆ.ಬಸವರಾಜ ತಂದೆ ಲೇಟ್ ಕೆ.ಸಿದ್ದಪ್ಪ ಅಮ್ಮನಕೇರಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೂಡ್ಲಿಗಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಚೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ದೃಢೀಕೃತ ನಕಲು

ಶಿರಸ್ತೇದಾರರು
ತಾಲೂಕು ಕಛೇರಿ
ಕೂಡ್ಲಿಗಿ.